## ಕಳೆದ ಸಂಚಿಕೆಯಲ್ಲಿ

ದೇವಪ್ಪ ಅನಸವ್ವ ಮದುವೆಯಾದ ಬಳಿಕ ಸಂಬಂಧ ಹಳಸಲು ಆರಂಭಿಸುತ್ತದೆ. ಇಬ್ಬರ ನಡುವೆ ಜಗಳ ನಡೆಯುತ್ತದೆ. ಹೋಟೆಲ್ ರಣರಂಗವಾಗುತ್ತದೆ. ವಿಪರೀತ ಸಾಲ ಮಾಡಿದ ದೇವಪ್ಪ ಅದನ್ನು ತೀರಿಸಲಾಗದೆ ಪರಿತಪಿಸುತ್ತಾನೆ. ಹೋಟೆಲಿಗೆ ಬೇಕಾದ ಸಾಮಾನನ್ನು ಅನಸವ್ವ ಸುಭಾಸ ಕೈಯಲ್ಲಿ ತರಿಸಿದಾಗ ದೇವಪ್ಪನಿಗೆ ಉರಿದುಹೋಗುತ್ತದೆ. ಕೈ ಕೈ ಮಿಲಾಯಿಸುವವರೆಗೆ ಹೋಗುತ್ತಾರೆ. ಹೋಟೆಲಿನವರ ಸಹಾಯದಿಂದ ಜಗಳ ನಿಂತುಹೋಗುತ್ತದೆ. ಗಂಡನ ಜತೆಗೂ ಅನಸವ್ವ ಜಗಳಾಡುವುದು ಜಗಜ್ಜಾಹೀರಾಗುತ್ತದೆ. ದೇವಪ್ಪ ಮನಪರಿವರ್ತನೆ ಮಾಡಿಕೊಳ್ಳುತ್ತಾನೆ. ಅನಸವ್ವ ಜೊತೆಗೆ ಕಾದಾಡುವುದು ಬಿಟ್ಟು ಪ್ರೀತಿಯ ಹೊಳೆ ಹರಿಸಲಾರಂಭಿಸುತ್ತಾನೆ. ಆಕೆಯ ಅಡುಗೆಯನ್ನು ಹೊಗಳಲಾರಂಭಿಸುತ್ತಾನೆ. ಸಂಸಾರ ಹಾದಿಗೆ ಬಂದಿದ್ದು ಕಂಡು ಊರ ಮಂದಿಗೂ ಸಮಾಧಾನವಾಗುತ್ತದೆ.



ದುಂಡಪ್ಪಕಾಕಾ, ಶಿವಪುತ್ರಕಾಕಾ, ವೀರಭದ್ರಪ್ಪ, ಸೋಮಣ್ಣ ಇನ್ನೂ ಅನೇಕರು ಬಡ್ಡಿ ವ್ಯವಹಾರ ಮಾಡುತ್ತಿದ್ದರೂ ತಮ್ಮೂರಲ್ಲಿ ಹೊರಗಿನಿಂದ ಬಂದವರೇ ಹೆಚ್ಚು ಪ್ರಸಿದ್ಧರಾಗುತ್ತ ಹೊರಟಿದ್ದು ವಿಚಿತ್ರವಾಗಿತ್ತು. ಒಟ್ಟಿನಲ್ಲಿ ಈ ಊರಿನಲ್ಲಿ ದೇವಣ್ಣ ಹೊರಗಿನವನು, ಅನಸವ್ವ ಹೊರಗಿನವಳು, ಕಂಡಕ್ಟರ್ ಹೊರಗಿನವನು. ಆದರೆ ಅವರು ಇವರಿಗಿಂತ ಹೆಚ್ಚು ಜಾಣತನದಿಂದ ಮಾಡುತ್ತಿದ್ದಿರಬೇಕು. ಅವರನ್ನು ಕೇಳಿಯೆ ಊರು ಮುಂದಿನ ಹೆಜ್ಜೆಯಿಡುತ್ತದೆ ಎನ್ನುವಂತಾಗಿತ್ತು. ಅವರಿಗಾಗಿ ಕಾಯುತ್ತಿತ್ತು. ಮನುಷ್ಯ ಸೊಕ್ಕಿನಿಂದ ಮೆರೆಯಬಾರದು ಎನ್ನುವುದಕ್ಕೆ ಕಂಡಕ್ಟರ್ ತನ್ನ ಸಾವಿನಲ್ಲಿ ನಿದರ್ಶನವಾದನೆಂದು ಊರವರು ಮಮ್ಮಲ ಮರುಗಿದರು. ಕಣ್ಣೀರು ತೆಗೆದು ಕನಿಕರಪಟ್ಟರು. ಇನ್ನೂ ಬದುಕಿ ಬಾಳಬೇಕಾಗಿದ್ದ ಜೀವ ಹೀಗೆ ಅಚಾನಕ್ ಹೊರಟುಹೋದರೆ ಯಾರಿಗೆ ತಾನೆ ನೋವಾಗದು? ಆ ದಿನ ಮೋಟಾರ ಸೈಕಲ್‌ನ್ನು ಕಡಿಮೆ ವೇಗದಲ್ಲಿ ಹೊಡೆದುಕೊಂಡು ಬರಬಾರದಿತ್ತೆ? ಅಂದರೆ ವಿಧಿಯ ಆ ಗಳಿಗೆ ತಪ್ಪುತ್ತಿತ್ತೇನೊ? ಎಷ್ಟೋ ಸಲ ಪಂಕ್ಚರ್ ಆಗಿದೆಯೆಂದು ಬೈಕನ್ನು ಬಸ್‌ಸ್ಟ್ಯಾಂಡ್ ಪಕ್ಕದ ನೀರಲಗಿಯವರ ಅಂಗಳದಲ್ಲಿಟ್ಟು ಬಸ್ಸಿಗೆ ಹೋಗುವಂತಹ ವ್ಯಕ್ತಿಯ ಗಾಡಿ ಆ ದಿನ ಯಾಕೆ ಪಂಕ್ಚರ್ ಆಗಲಿಲ್ಲವೋ? ಯಾಕೆ ಅದರ ಹವಾ ಕಡಿಮೆ ಆಗಲಿಲ್ಲವೊ? ಅಂತೂ ಕಂಡಕ್ಟರ್ ಬಡ್ಡಿ, ಚಕ್ರಬಡ್ಡಿಯ ತಿರುಗಣಿಯಲ್ಲಿ ಸಿಕ್ಕಿಬಿದ್ದನೆ? ದುರ್ಗಪ್ಪನಾದರೂ ಆ ದಿನ ಸ್ವಲ್ಪ ತಡವಾಗಿ ಹೋಗಬಾರದಿತ್ತೆ? ಹಾಗಾಗಿದ್ದರೆ ಕಂಡಕ್ಟರ್ ಅಷ್ಟೊತ್ತಿಗೆ ಹೊರಟುಹೋಗಿರುತ್ತಿದ್ದ. ದುರ್ಗಪ್ಪ ಮೊದಲೆ ಸಿಡುಕಿನ ಹುಡುಗ. ಹಿಂದೆ ಹಲವು ಸಲ ಅನಸವ್ವಳೊಂದಿಗೆ ಜಗಳ ಮಾಡಿ ಹೊಟೇಲ್ ಬಿಟ್ಟು ಹೋಗಿದ್ದ. ದೇವಪ್ಪನೆ ಅವನನ್ನು ರಮಿಸಿ ಮತ್ತೆ ಕೆಲಸಕ್ಕೆ ಇಟ್ಟುಕೊಂಡಿದ್ದ. ಮಾಲೀಕರ ಜೊತೆಯೆ ಜಗಳ ತೆಗೆಯುವ ವ್ಯಕ್ತಿ ಅನ್ಯ ವ್ಯಕ್ತಿಗಳ ವಿರುದ್ಧ ತೆಗೆಯಲಾರನೆ? ಅಂತಹ ಕಠಿಣ ಸಮಯದಲ್ಲಿ ದುರ್ಗಪ್ಪನನ್ನು ಸಂಭಾಳಿಸುವ ಬಗೆ ಹೇಗೆಂದು ಕಂಡಕ್ಟರ್ ವಿಚಾರ ಮಾಡಬೇಕಿತ್ತು. ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡರೆ ಸಾವಿರ ವರ್ಷ ವಯಸ್ಸು ಎನ್ನುವ ಗಾದೆಮಾತಾದರೂ ಕಂಡಕ್ಟರ್‌ಗೆ ನೆನಪಾಗಿದ್ದರೆ!

ಕಂಡಕ್ಟರ್ ತನ್ನದೆ ಬಸ್ಸಿನ ಅಪಘಾತದಿಂದ ಹಿಂದೆ ತಪ್ಪಿಸಿಕೊಂಡಿದ್ದಿರಬಹುದು. ಆದರೆ ದುರದೃಷ್ಟ ಆ ದಿನ ಕಂಡಕ್ಟರ್‌ನನ್ನು ಹಿಂಬಾಲಿಸುತ್ತಿತ್ತೆಂದು ಕಾಣುತ್ತದೆ. ದುರ್ದೈವ ಎನ್ನುವುದು ದುರ್ಗನಿಂದ ಹತ್ಯೆ ಮಾಡಿಸಿತು. ಒಂದು ಸಣ್ಣ ಜಗಳ ಮೃತ್ಯುವಿಗೆ ಈಡು ಮಾಡಿತು. ಹಿಂದೆಯೂ ದುರ್ಗನ ಜೊತೆ ಒಂದು ಸಲ ಜಗಳವಾಗಿತ್ತು. ಆವಾಗಲೂ ದುರ್ಗನ ಮನೆಗೆ ನಾಲ್ಕೈದು ಜನರ ಜೊತೆ ಹೋಗಿ ಮನೆಯನ್ನು ರಣರಂಗ ಮಾಡಿ ಧಮಿಕಿ ಹಾಕಿ ದುಡ್ಡು ಇಸಿದುಕೊಂಡು ಬಂದಿದ್ದರಂತೆ. ಅಷ್ಟೆಲ್ಲ ಮುಖ ಕೆಡಿಸಿಕೊಂಡ ಮೇಲೆ ಕಂಡಕ್ಟರ್ ಅವನಿಗೆ ಸಾಲ ಕೊಡುವುದನ್ನು ನಿಲ್ಲಿಸಬಹುದಾಗಿತ್ತು. ಹತ್ತಿಪ್ಪತ್ತು ರೂಪಾಯಿ ಬಡ್ಡಿಯ ಆಸೆಗಾಗಿ ಜೀವವನ್ನೇ ಕಳೆದುಕೊಂಡ. ಅವನು ಆವತ್ತು ಬಸ್‌ನಲ್ಲಿ ಬಂದಿದ್ದರೆ ಈ ದುಃಖಕರ ಘಟನೆ ನಡೆಯುತ್ತಿರಲಿಲ್ಲವೇನೊ? ತಾನು ಬಹಳ ನಿಷ್ಠಾವಂತ ನೌಕರ. ಸರ್ಕಾರದ ಅನ್ನ ತಿನ್ನುವ ಹೊತ್ತಿನಲ್ಲಿ ಸ್ವಂತ ಕೆಲಸಕ್ಕೆ ಬಸ್ಸಿನಲ್ಲಿ ಪುಕ್ಕಟೆ ಪ್ರಯಾಣಿಸಲಾರೆ ಎಂದಿದ್ದನಂತೆ. ಅದು ಮೇಲಿನ ಮಾತು ಇದ್ದಿರಲೂಬಹುದು. ಸಾಲ ವಸೂಲಿಗೆ ನಾಲ್ಕಾರು ಹಳ್ಳಿಗಳಿಗೆ ಹೋಗಿ ಬರಲು ಇವನು ಬೈಕ್ ಬಿಟ್ಟು ಬೇರೆ ವಾಹನ ಉಪಯೋಗಿಸಲು ಆಗುತ್ತದೆಯೆ? ಬಸ್ಸಿನಲ್ಲಿದ್ದಾಗಿನಿಗಿಂತ ಬೈಕ್ ಮೇಲೆಯೇ ಕಂಡಕ್ಟರ್‌ನ ಸಡಗರ ಹೆಚ್ಚು. ಆತ ಬೈಕ್ ಮೇಲೆ ಬರುವಾಗ ಅವನದೇ ಆದ ಒಂದು ಶೈಲಿಯಿತ್ತು. ಕಣ್ಣಿಗೆ ಗಾಗಲ್ ಹಾಕಿ, ಹೊಸ ಹೊಸ ಬಟ್ಟೆಬರೆ ತೊಟ್ಟು ಠಾಕುಠೀಕಾಗಿರುವವನು. ಒಂದು ರೀತಿಯಲ್ಲಿ ಮಲ್ಲೂರಿಗೆ ಶೋಕಿ ಕಲಿಸಿದವನು ಇವನೇ ಇರಬೇಕು. ಇಸ್ತ್ರಿ ಮಾಡಿದಾಗ ಒಂದು ಸುಕ್ಕು ಇದ್ದಿರಬಾರದು. ಪ್ಯಾಂಟ್ ಶರ್ಟಿಗೆ ನೀಟಾಗಿ ಗೀರು ಇದ್ದಿರಬೇಕು. ಹೊಳೆಹೊಳೆಯುವ ನೀಲಿ, ನೇರಳೆ, ಹಳದಿ ಬೆಲ್‌ಬಾಟಮ್ ಪ್ಯಾಂಟ್ ಮತ್ತು ಅದಕ್ಕೆ ವ್ಯತಿರಿಕ್ತ ಹಾಗೂ ತದ್ವಿರುದ್ಧ ಎನಿಸುವ ಅಂಗಿಯಿರುತ್ತಿತ್ತು.

ಅನಸೂಯಾ ಸಹ ಇತ್ತೀಚೆಗೆ ಸೀರೆಗೆ ವ್ಯತಿರಿಕ್ತ ಎನಿಸುವ ರವಿಕೆ ತೊಡುತ್ತಿದ್ದಳು. ಅವಳು ಯಾವ ಬಣ್ಣದ ಸೀರೆ ಮತ್ತು ಯಾವ ಬಣ್ಣದ ಬ್ಲೌಸ್ ತೊಟ್ಟಿರುವಳೆಂದು ನೋಡಿದಾಗಲೇ ಕೆಲವು ತರುಣಿಯರಿಗೆ ಸಮಾಧಾನ. ಎಷ್ಟೋ ದಿನ ಅನಸವ್ವ ಹೊರಗೆ ಸಿಗುವುದು ಅಪರೂಪ. ಹಾಗಾಗಿ ಹೊಟೇಲಿಗೆ ಹೋಗುವ ರೂಢಿಯಿದ್ದ ಪರಿಚಯದ ಮುದುಕಿಯರಲ್ಲಿ ಮೊರೆಯಿಡುತ್ತಿದ್ದರು. ವೃದ್ಧೆಯರ ಕಣ್ಣುಗಳು ಮಸುಕಾಗಿರುವ ಕಾರಣಕ್ಕೋ, 'ಅಯ್ಯ, ಇದೇನೆ ಯವ್ವಾ, ಎಂಥಾ ಬಣ್ಣ ಗೊತ್ತೇ ಆಗವಲ್ದು' ಎನ್ನುತ್ತ ಸೀರೆ, ರವಿಕೆಯ ವರ್ಣಗಳು ತಿಳಿಯದೆ, ಅದರ ಹೊರಗು ತಿಳಿಯದೆ, ಸೀರೆಯಂಚಿನ ಹೊದಿಕೆ ತಿಳಿಯದೆ ಅವರು ಬೊಚ್ಚುಬಾಯಿಯಲ್ಲಿ ಹೇಳುತ್ತಿದ್ದ ಬಣ್ಣಗಳು ಒಂದಕ್ಕೊಂದು ತಾಳೆಯಾಗದೆ ಅವಾಂತರವಾಗುವುದೂ ಇತ್ತು. ಈ ಅಜ್ಜಿಯರು ಹೇಳಿದಂತೆ ಉಟ್ಟರೆ ತಮಗಿರುವ ಸೌಂದರ್ಯ ಸಹ ಇಲ್ಲವಾಗುವುದೆಂದು ಅವರು ಹಣೆಹಣೆ ಬಡಿದುಕೊಳ್ಳುವರು. ಹೊಸ ಸೀರೆ ರವಿಕೆಗೆ ದುಡ್ಡು ಹಾಳಾಗಿದ್ದಕ್ಕೆ ಮರುಗುವರು. ಇವರು ಒಂದೊಂದು ಸಲ ಖರೀದಿಸಿ, ಉಡುವ ಹೊತ್ತಿಗೆ ಅನಸೂಯಾ ಮುಂದಿನ ಮಜಲಿಗೆ ದಾಟಿರುತ್ತಿದ್ದಳು. ಆಕೆ ಇತ್ತೀಚೆಗೆ ತರಿಸುತ್ತಿದ್ದ ಮಿಶ್ರ ಬಣ್ಣದ ಸೀರೆಗಳನ್ನು ಮೆಚ್ಚಿಕೊಂಡು 'ಈಗ ಅನಸವ್ವ ಅದೇನೋ ಎರಡೆರಡು ಬಣ್ಣ ಕೂಡಿದ್ದು ಉಡ್ತಾ ಇದಾಳಂತ. ಏನು ಮಿಶ್ರ ಮಾಡ್ತಾಳೀಕಿ?' ಎನ್ನುವ ಮಾತು ಹಬ್ಬಿತು. ಕಾಂಟ್ರಾಸ್ಟ್ ಕಲರ್ಸ್ ಮನುಷ್ಯನೊಳಗಿನ ಧನಾತ್ಮಕ ಶಕ್ತಿಯನ್ನು ಹೆಚ್ಚಿಗೆ ಮಾಡುವುದೆಂದು ಸುಭಾಸನಿಗೆ ಹೊಂಗಲದ ಹೊಸ ಬಟ್ಟೆ ಅಂಗಡಿಯವರು ಹೇಳಿದ್ದರು. ಅವರು ಅವನಿಗೆ ಪರಿಚಯದವರೆ ಇದ್ದರು. ವ್ಯತಿರಿಕ್ತ ಸನ್ನಿವೇಶಗಳನ್ನು ಎದುರಿಸಲು ಈ ತರಹದ ಪೋಷಾಕು ನೆರವು ನೀಡುತ್ತವೆಯೆನ್ನುವ ಜಾಹೀರಾತು ಸಹ ತೋರಿಸಿದ್ದರು. ಆದರೆ ಅವನ ಜೀವನದ ಅತ್ಯಂತ ವ್ಯತಿರಿಕ್ತ ಘಳಿಗೆಯಲ್ಲಿ ಆ ಉಡುಪು ಅವನ ನೆರವಿಗೆ ಏಕೆ ಬರಲಿಲ್ಲವೊ ಏನೋ? ತೊಟ್ಟ ವ್ಯತಿರಿಕ್ತ ಉಡುಪಿನಲ್ಲಿಯೆ ಅವನ ಹತ್ಯೆ ಮಾಡಲಾಗಿತ್ತು! ಕಾಂಟ್ರಾಸ್ಟಿಂಗ್ ಉಡುಪು ಹೊಲಿದು ಕೊಡಲು ಬಟ್ಟೆಯಂಗಡಿಯವರು ಗುರುತಿನ ಟೇಲರ್ನನ್ನು ಪಕ್ಕವೇ ಇರಿಸಿದ್ದರು. ಆಸ್ಪತ್ರೆಯಲ್ಲಿ ಮೆಡಿಕಲ್ ಶಾಪ್ ಇರುವಂತೆ ಪಕ್ಕದಲ್ಲಿಯೆ ಹೆಸರಾಂತ ಟೇಲರ್ ಅಂಗಡಿ ಸುರು ಆಗಿತ್ತು.

ಕಂಡಕ್ಟರ್‌ನ ವಿವಿಧ ಬಟ್ಟೆಗಳನ್ನು ನೋಡಿದ ಕಾಲೇಜು ಹುಡುಗರು ಇತ್ತೀಚೆಗೆ ಕಂಡಕ್ಟರನ ಪರಿಚಯ ಹೇಳಿಕೊಂಡು ಕ್ಲಾತ್ ಶಾಪ್ ಮತ್ತು ಆ ಟೇಲರ್ ಕಡೆ ಹೋಗಲು ಆರಂಭಿಸಿದ್ದರು. ತಾವು ಕಲಿತು ನೌಕರಿ ಹಿಡಿಯುವುದಾದರೆ ಕಂಡಕ್ಟರ್ ನೌಕರಿಯನ್ನೇ ಹಿಡಿಯುವುದು ಎಂಬ ತೀರ್ಮಾನಕ್ಕೆ ಅವರೆಲ್ಲ ಬಂದಿದ್ದರು. ಸುಭಾಸನ ಊರು ಮಲ್ಲೂರಿನ ಹತ್ತಿರವೇ ಇರುವ ಹೊಸೂರು. ಬೈಲಹೊಂಗಲದಿಂದ ಹೊಸೂರಿಗೆ ಹೋಗಬೇಕಾದರೆ ಹಾಗೂ ಹೊಸೂರಿನಿಂದ ಬೈಲಹೊಂಗಲಕ್ಕೆ ಹೋಗಬೇಕಾದರೆ ಮಲ್ಲೂರಿನ ಮೇಲೆಯೇ ಹೋಗಬೇಕು. ಸುಭಾಸ ಯಾವಾಗಲೂ ಬಸ್ಸಿನಲ್ಲಿ ಓಡಾಡುವವನು. ಕೆಲವೊಮ್ಮೆ ಬೈಕ್ ತಂದಿರುತ್ತಿದ್ದ. ಮೋಟಾರ ಸೈಕಲನ್ನು ಅತಿ ಕಡಿಮೆ ವೇಗದಲ್ಲಿ ಓಡಿಸುವುದೊಂದು ಅವನ ಹವ್ಯಾಸ.

(ಸಶೇಷ)